



# ಕೀಟ ಲೋಕದ ಹಸಿರು ಸುಂದರಿ!

ಚಿತ್ರ ಬರಹ:
**ಗಣಪತಿ ಬಾಳೆಗದ್ದೆ**

ಈ ಹಸಿರು ತಿಗಣೆಯ ಮೈ ಬಹುತೇಕ ಹಸಿರು. ಅಲ್ಲಲ್ಲಿ ಕತ್ತಲ ಚೂರಿನಂತ ಕಪ್ಪು ಕಲೆಗಳು. ಮೂರು ಗಂಟಿರುವ ವಾಸನಾ ಗ್ರಾಹಿ ಕಪ್ಪು ಕೋಡುಗಳು. ಮೂರು ಜೋಡಿ ಕಾಲುಗಳ ಕೆಲ ಭಾಗ ಹಸಿರು, ಕಪ್ಪು; ಕೆಲ ಭಾಗ ಕಂದು. ಇವಕ್ಕೆ ಕವಚದೊಳಗೆ ನವಿರಾದ ಮಾಸಲು ಕಂದು ರೆಕ್ಕೆಗಳಿವೆ.

ಇವುಗಳ ಕಂಗಳು ತುಂಬ ಚುರುಕು. ಇವು ನಮ್ಮ ಬರುವಿಕೆಯನ್ನು ದೂರದಿಂದಲೇ ಗ್ರಹಿಸುತ್ತವೆ. ಹತ್ತಿರ ಹೋಗುತ್ತಿದ್ದಂತೆ ಎಲೆಗಳ ಅಡಿಯಲ್ಲಿ ಅವಿತುಕೊಳ್ಳುತ್ತವೆ. ಇಲ್ಲವೇ ರೆಕ್ಕೆ ಬಿಚ್ಚಿ ಹಾರಿ ಹೋಗುತ್ತವೆ.

ತೊಂಡಜ್ಜಿ ಅಥವ ತೊಂಡೋಜಿ ಎಂಬ ಕಾಡು ಗಿಡದ ಹಣ್ಣುಗಳು ಇವಕ್ಕೆ ಬಹಳ ಪ್ರೀತಿ. ಹಣ್ಣು ಸಿಗದಿದ್ದರೆ ಅದರ ಕಾಯಿಗಳನ್ನೇ ತಮ್ಮ ಚೂಪು ಮೂತಿಯಿಂದ ಕೆರೆದು ತಿನ್ನುತ್ತವೆ. ಆ ಗಿಡದಲ್ಲೇ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಅಂಥ ಮರಿಗಳಲ್ಲಿ ಕೆಲವು ಮಾತ್ರ ಹೋರಾಡಿ ಬದುಕಿ ದೊಡ್ಡವಾಗುತ್ತವೆ. ಮಳೆಗಾಲ ಜೋರಾಗುತ್ತಿದ್ದಂತೆ ಗಿಡದಲ್ಲಿನ ಹಣ್ಣುಗಳು ಮುಗಿಯುತ್ತವೆ. ಹಣ್ಣುಗಳು ಮುಗಿಯುತ್ತಿದ್ದಂತೆ ಕೀಟಗಳೂ ಮಾಯವಾಗುತ್ತವೆ. ಇವನ್ನು ಇಂಗ್ಲಿಷ್‌ನಲ್ಲಿ 'ಮೆಟಾಲಿಕ್ ಗ್ರೀನ್ ಜುವೆಲ್ ಬಗ್' ಎನ್ನುತ್ತಾರೆ. 'ಗ್ರೀನ್ ಬ್ಯೂಟಿ' ಎಂಬ ಹೆಸರೂ ಇದೆ. ಕನ್ನಡದಲ್ಲಿ ಬಹುತೇಕರು ಹಸಿರು ಹುಳು ಅಥವಾ ಹಸಿರು ಕೀಟವೆಂದು ಕರೆಯುತ್ತಾರೆ.